ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 6, MAY-JUNE 2022, Pp. 90-96.**
**©*IIMRD*, Mysuru.**

IIMRD JOURNALS
**www.iimrd.com**

# ಇರುಳಿಗ ಬುಡಕಟ್ಟಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು–ವಿಮರ್ಶಾತ್ಮಕ ಅಧ್ಯಯನ

**ವಿಷಕಂಠನಾಯಕ. ಟಿ.ಎಮ್* ಮತ್ತು ಪ್ರೊ. ಎಮ್.ಆರ್. ಗಂಗಾಧರ್****
*ಅತಿಥಿ ಉಪನ್ಯಾಸಕರು; **ಪ್ರಾಧ್ಯಾಪಕರು
ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ (Abstract)**

*ಕರ್ನಾಟಕ ರಾಜ್ಯದಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯಗಳಲ್ಲಿ ತುಂಬಾ ಸಣ್ಣ ಪ್ರಮಾಣದಲ್ಲಿ ಇರುವ ಇರುಳಿಗ ಬುಡಕಟ್ಟು ಸಮುದಾಯವು ರಾಜ್ಯಾದ್ಯಂತ ಅಲ್ಲಲ್ಲಿ ಕಂಡು ಬಂದರೂ ಸಹಾ, ರಾಮನಗರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಇರುಳಿಗರನ್ನು, ಇರುಳ, ಇರುಳರು, ಇಲ್ಲಿಗರು ಹಾಗೂ ಕಾಡು ಪೂಜಾರಿ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತಿದೆ. (ರಾಜ್ಯ ಪರಿಶಿಷ್ಟ ವರ್ಗಗಳ ನಿರ್ದೇಶನಾಲಯ–2001) ತಾವು ಕಾಡು ಪೂಜಾರಿಗಳು ಅಥವಾ ಕಾಡಿನ ಸಂತರು ಎಂದು ಹೇಳಿಕೊಳ್ಳುತ್ತಾರೆ. ಇರುಳಿಗರು ಹೆಚ್ಚಿನ ಸಂಖ್ಯೆಯಲ್ಲಿ ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಕಂಡು ಬರುತ್ತಾರೆ. ಅವರಿಗೆ ಅಲ್ಲಿ ಇರುಳ ಮತ್ತು ಇರುಳರ್ ಎಂಬ ಹೆಸರಿನಿಂದಲೂ ಸಹ ಕರೆಯುತ್ತಾರೆ.*

**ಮುಖ್ಯಪದಗಳು (Keywords):** *ಇರುಳಿಗ, ಇರುಳ, ರಾಮನಗರ, ಬುಡಕಟ್ಟು.*

## ಪೀಠಿಕೆ

ಕರ್ನಾಟಕ ರಾಜ್ಯದಲ್ಲಿನ 50 ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಗುರಿತಿಸಲಾಗಿದ್ದು, ಅದರಲ್ಲಿ ಇರುಳಿಗ ಬುಡಕಟ್ಟು ಸಹ ಒಂದಾಗಿದೆ. 2011ರ ಜನಗಣತಿಯ ಪ್ರಕಾರ 10,259 ಜನಸಂಖ್ಯೆಯನ್ನು ಹೊಂದಿರುವ ಇವರು ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಕಂಡು ಬರುತ್ತಾರೆ. ಇರುಳಿಗರು ಕರ್ನಾಟಕ ರಾಜ್ಯದಲ್ಲಿ ರಾಮನಗರ ಜಿಲ್ಲೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರತಿಶತ 50ರಷ್ಟು ವಾಸಿಸುತ್ತಿದ್ದು, ಇನ್ನುಳಿದಂತೆ ಹಾಸನ, ಬೀದರ್, ಗುಲ್ಬರ್ಗಾ, ಶಿವಮೊಗ್ಗ ಮತ್ತು ಮುಂತಾದ ಜಿಲ್ಲೆಗಳಲ್ಲಿ ನೆಲೆಸಿ ಜೀವನ ದೂಡುತ್ತಿದ್ದಾರೆ.

## ವಾಸಸ್ಥಾನ

ಪ್ರತಿಯೊಂದು ಆದಿವಾಸಿ ಸಮುದಾಯವು ತನ್ನದೇ ಆದ ನಿರ್ಧಿಷ್ಟ ಭೂಪ್ರದೇಶವನ್ನು ಹೊಂದಿರುತ್ತವೆ. ಆದಿವಾಸಿಗಳು ತಮ್ಮ ನೆಲೆಯ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿರುವವರು. ಅವರ ಎಲ್ಲೆಯನ್ನು ಯಾರಾದರೂ ಅತಿಕ್ರಮಿಸಿದಾಗ ಅದನ್ನು ಸಹಿಸದೇ ಅದಕೋಸ್ಕರ ಹೋರಾಟ ಮಾಡುವಂತಹ ಮನೋಭಾವವನ್ನು ಹೊಂದಿರುತ್ತಾರೆ. ನಿರ್ಧಿಷ್ಟ ಭೂ ಪ್ರದೇಶವು ಅವರಲ್ಲಿ ಆತ್ಮೀಯತೆ ಹಾಗೂ ಸಹಕಾರವನ್ನು ಬೆಳೆಸುತ್ತದೆ. ಬುಡಕಟ್ಟು ಸಮುದಾಯಗಳಲ್ಲಿ ಕೆಲವು ಸಮುದಾಯದವರು ವರ್ಷದ ಇಂತಿಷ್ಟು

*Please cite this article as: ಪ್ರಕಾಶ್. ಕೆ ಮತ್ತು ಎಂ.ಬಿ ಸುರೇಶ.* (2022). ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಮಹಿಳೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡರೀಸರ್ಚ್‌ಜರ್ನಲ್‌ಆಫ್‌ಐಐಎಂಆರ್‌ಡಿ, 3(6). ಪು.ಸಂ.* 90–96.

ಕಾಲ ಆಹಾರ ಸಂಗ್ರಹಣೆಗಾಗಿಯೇ ವ್ಯಾಪಾರಕ್ಕಾಗಿಯಾದರೂ, ಜೀವನೋಪಾಯಕ್ಕಾಗಿ ಸಂಚರಿಸಿದರೂ ಅವರಲ್ಲಿ ಹುಟ್ಟಿದ, ಪ್ರದೇಶದಲ್ಲಿ ವಾಸಿಸುವ ಬಗೆಗೆ ಸಮುದಾಯಿಕ ಭಾವನೆಗಳ ಸದಾ ಜಾಗೃತವಾಗಿರುತ್ತದೆ.

ಮೊದಲಿಗೆ ಇರುಳಿಗರು ಗುಹೆಗಳಲ್ಲಿ ವಾಸಿಸುತ್ತಿದ್ದರು. ಗುಹೆಗಳನ್ನು ಅವರು ಗವಿಗಳೆಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಇಂತಹ ಗವಿಗಳನ್ನು ಅರಣ್ಯದ ಸಮೀಪ ಅಥವಾ ಬೆಟ್ಟಗುಡ್ಡಗಳ ಸುತ್ತಾ–ಮುತ್ತ ನಿರ್ಮಿಸುತ್ತಿದ್ದರು ಏಕೆಂದರೆ ಅವರಿಗೆ ಬೇಟೆಯಾಡಲು ಮತ್ತು ಆಹಾರ ಸಂಗ್ರಹಿಸಲು ನೆರವಾಗಲಿ ಎಂಬ ಉದ್ದೇಶವಿತ್ತು (People of india–2003). ಪ್ರತಿಯೊಂದು ಗುಹೆಯಲ್ಲೂ ಸಾಕಷ್ಟು ಕುಟುಂಬಗಳು ಇರುತ್ತಿದ್ದವು. ಬೇಟೆಯಾಡುವುದುದರಲ್ಲಿ ಮತ್ತು ಮಕ್ಕಳ ಪೋಷಣೆಯಲ್ಲಿ ಅವರು ಸಮನಾಗಿ ತೊಡಗಿಕೊಳ್ಳತ್ತಿದ್ದರು. ನಂತರ ಬಿದಿರು ಮತ್ತು ಹುಲ್ಲಿನಿಂದ ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು ಇದಾದ ನಂತರ ಮಣ್ಣಿನ ಇಟ್ಟಿಗೆಗಳಿಂದ ಮನೆ ಕಟ್ಟುವುದನ್ನು ಕಲಿತುಕೊಂಡರು. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರದ ಪ್ರಯತ್ನದಿಂದಾಗಿ ಇಟ್ಟಿಗೆ ಮತ್ತು ಕಲ್ಲಿನಿಂದ ಗೋಡೆಗಳನ್ನು ನಿರ್ಮಿಸಿ ಮೇಲ್ಛಾವಣಿಗೆ ಹಂಚನ್ನು ಉಪಯೋಗಿಸುವುದು ಕಂಡುಬರುತ್ತಿದೆ.

**ಜೀವನೋಪಾಯ**

ಇರುಳಿಗರು ಮೊದಲಿಗೆ ಜೀವನೋಪಾಯಕ್ಕಾಗಿ ಅರಣ್ಯದಲ್ಲಿ ಪ್ರಾಣಿ–ಪಕ್ಷಿಗಳನ್ನು ಬೇಟೆಯಾಡುವುದರೊಂದಿಗೆ ಅರಣ್ಯದಲ್ಲಿ ದೊರೆಯುವ ಕಿರು ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರು. ನಂತರದ ದಿನಗಳಲ್ಲಿ ದಿನಗೂಲಿ ಕಾರ್ಮಿಕರಾಗಿ, ಕೃಷಿ ಕಾರ್ಮಿಕರಾಗಿ ಮತ್ತು ಕಟ್ಟಿಗೆ (ಸೌದೆ) ಮಾರುವ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ.

**ಆಹಾರ**

ಇರುಳಿಗರು ಮುಖ್ಯವಾಗಿ ಕಾಡಿನಲ್ಲಿ ದೊರೆಯುವ ಮುಳ್ಳು ಗೆಣಸು. ಅಂಬಲಿ ಗೆಣಸು, ನೊಲೆ ಗೆಣಸು ಇತ್ಯಾದಿಗಳನ್ನು ಬಗೆದು ತಿನ್ನುತ್ತಾರೆ. ಮರಗೆಣಸು, ಕುವ್ವೆ ಗೆಣಸು, ಬೆಲ್ಲ ಗೆಣಸುಗಳನ್ನು ಇಂದು ತಮ್ಮ ಮನೆಯ ಅಂಗಳದಲ್ಲಿ ಬೆಳೆದು ಅವುಗಳನ್ನು ಆಹಾರಕ್ಕಾಗಿ ಬಳಸುತ್ತಾರೆ. ಇಂದಿಗೂ ಇರುಳಿಗರಲ್ಲಿ ಪ್ರತಿಯೊಬ್ಬರೂ ಸಂಕ್ರಾಂತಿ ಹಬ್ಬಕ್ಕೆ ಕಾಡುಗೆಣಸನ್ನು ಅಗೆದು ತಂದು ಹಳಗೆಯಲ್ಲಿ ಬೇಯಿಸಿ ಬೆಲ್ಲ, ಜೇನು ಸೇರಿಸಿ ತಿನ್ನಲೇಬೇಕೆಂಬ ನಿಯಮವಿದೆ. ಕೆರೆಯಲ್ಲಿ ಸಿಗುವ ಗೆಂಡೆಗಳನ್ನು ಕಿತ್ತು ಕಲ್ಲಿನ ಮೇಲೆ ಉಜ್ಜಿ ಸಾರು ಮಾಡಿ ತಿನ್ನುತ್ತಾರೆ.ಕಾಡಿನಲ್ಲಿ ಸಿಗುವ ಹಲವಾರು ಗೆಡ್ಡೆ–ಗೆಣಸು, ಸೊಪ್ಪು, ಗೆಂಡೆ ಇತ್ಯಾದಿಗಳ ಸ್ವಾದಿಷ್ಟಭರಿತವಾದ ಖಾದ್ಯಗಳ ರುಚಿಯನ್ನು ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ತೋರಿಸಿದ್ದಾರೆ. ಇರುಳಿಗರು ಹಲವಾರು ಬಗೆಯ ಸ್ವಾದಿಷ್ಟಭರಿತವಾದ ಸೊಪ್ಪುಗಳನ್ನು ಆಹಾರಕ್ಕಾಗಿ ಬಳಸುತ್ತಾರೆ.

ಇರುಳಿಗರು ಆಹಾರಕ್ಕಾಗಿ ತರಕಾರಿ, ಹಣ್ಣ ಹಂಪಲುಗಳು, ಸಣ್ಣ ಪ್ರಾಣಿಗಳು ಮತ್ತು ಗೆಡ್ಡೆ ಗೆಣಸುಗಳನ್ನು ಬಳಸುತ್ತಾರೆ. ಪ್ರತಿಯೊಬ್ಬ ದಂಪತಿಯು ಕೂಡ ಮುಂಜಾನೆ ಆಹಾರ ಸಂಗ್ರಹಣೆಗಾಗಿ ತರಳಿ ಜೇನು ಸಂಗ್ರಹಣೆ ಮಾಡುತ್ತಾರೆ. ಆಹಾರ ಬೇಯಿಸಿ ಮತ್ತು ಕೆಲವೊಂದು ಸಂದರ್ಭದಲ್ಲಿ ಬೆಯಿಸದೇ ತಿನ್ನುತ್ತಾರೆ.. ಮೊದಮೊದಲಿಗೆ ಉಪ್ಪನ್ನು ಮಾತ್ರ ಅವರು ಖರೀದಿಸುತ್ತಿದ್ದರಂತೆ ಆದರೆ ಕಾಲ ಕ್ರಮೇಣ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಲು ಪ್ರಾರಂಭಿಸಿದಾಗಿನಿಂದ ಅವರುಗಳು ಎಣ್ಣೆ, ಖಾರ, ಬಟ್ಟೆ ಇತ್ಯಾದಿ ವಸ್ತುಗಳನ್ನು ಖರೀದಿಸಲು ಕಲಿತರಂತೆ ಇಲಿಯು ಇವರ ಬಹು ಪ್ರಿಯವಾದ ಆಹಾರವಾಗಿದೆ.

**ಉಡುಪು**

ಮೊದಮೊದಲು ತೇಗ ಮರದ ಎಲೆಗಳನ್ನು ತಮ್ಮ ಬಟ್ಟೆಯಾಗಿ ಉಪಯೋಗಿಸುತ್ತಿದ್ದರು ಎಂದು ಹೇಳಲಾಗಿದೆ. ನಂತರ ಇರುಳಿಗ ಪುರುಷ ಮತ್ತು ಮಹಿಳೆಯರು ಸೊಂಟಕ್ಕೆ ಬಟ್ಟೆ ಕಟ್ಟಿಕೊಳ್ಳವುದನ್ನು ರೂಢಿಸಿಕೊಂಡು ಇತ್ತೀಚಿನ ದಿನಗಳಲ್ಲಿ ಇತರತಂತೆ ಮಹಿಳೆಯರು ಸೀರೆ ಉಪಯೋಗಿಸುತ್ತಾರೆ. ಆದರೆ ಇವರು ರವಕೆಯನ್ನು ಧರಿಸುವುದಿಲ್ಲ ಮತ್ತು ಪುರುಷರು ಪಂಚೆ, ಶರ್ಟು ಮತ್ತು ಪ್ಯಾಂಟ್‌ಗಳನ್ನು ಧರಿಸುವುದು ರೂಡಿಸಿಕೊಂಡಿದ್ದಾರೆ. ಮಹಿಳೆಯರು ಹಣೆಯ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು ಸಾಮಾನ್ಯವಾಗಿದೆ.

**ನೃತ್ಯ**

ಮದುವೆ ಹಬ್ಬ–ಹರಿದಿನಗಳು ಮತ್ತು ಸಾವು ಸಂಭವಿಸಿದ ಸಂದರ್ಭದಲ್ಲಿ ಇರುಳರು ನೃತ್ಯ ಮಾಡುತ್ತಾರೆ. ಹಾಗೂ ಬೇರೆ ಬೇರೆ ಸಂದರ್ಭದಲ್ಲಿ ಹಲವು ಬಗೆಯ ನೃತ್ಯಗಳನ್ನು ಮಾಡುವುದು ರೂಡಿಯಲ್ಲಿದೆ. ಡೋಳ್ಳನ್ನು (Drum) ಎಲ್ಲಾ ನೃತ್ಯಗಳಲ್ಲಿಯೂ ಬಳಸಲಾಗುತ್ತದೆ. ಮಹಿಳೆ ಮತ್ತು ಪುರುಷರು ಜೊತೆಗೂಡಿ ಚಪ್ಪಾಳೆ ಹಾಕುತ್ತ ಬೆಂಕಿಯ ಸುತ್ತಲೂ ನೃತ್ಯ ಮಾಡುತ್ತಾರೆ. ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಯುವಕ ಮತ್ತು ಯುವತಿಯರಿಗೆ ಸ್ವಾತಂತ್ರ್ಯವಿದ್ದು ತುಂಬಾ ಆಸಕ್ತಿ ಮತ್ತು ಶ್ರದ್ಧೆಯಿಂದ ನೃತ್ಯದಲ್ಲಿ ಪಾಲ್ಗೊಳ್ಳುವ ಮೂಲಕ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ರೂಡಿಯಲ್ಲಿದೆ.

**ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ**

ಕಾಡಿನ ಸಂತರು ಅಥವಾ ಪೂಜಾರಿಗಳು ಎಂದು ಇರುಳರನ್ನು ಗುರುತಿಸಲಾಗುತ್ತಿದೆ. ಇರುಳರನ್ನು ಇಲಿ ಮತ್ತು ಹಾವು ಹಿಡಿಯುವರು ಎಂದು ತುಂಬಾ ಕೆಳಮಟ್ಟದಿಂದ ಗುರುತಿಸಲಾಗುತ್ತಿದೆ. ಒಂದು ಕಾಲದಲ್ಲಿ ಅರಣ್ಯದಲ್ಲಿ ವಾಸಿಸುವಂತಹ ಮುಖ್ಯವಾದ ಬುಡಕಟ್ಟು ಎಂದು ಗುರುತಿಸಲಾಗುತ್ತಿದ್ದವರು. ಈಗ ಭಾರತದ ಬುಡಕಟ್ಟುಗಳಲ್ಲಿ ನಶಿಸುತ್ತಿರುವ ಸಮುದಾಯ ಎಂದು ಹೇಳುವುದು ಬೇಸರದ ಸಂಗತಿಯಾಗಿದೆ.

ಅರಣ್ಯದಲ್ಲಿ ವಾಸಿಸುತ್ತಿರುವ ಮತ್ತು ಅರಣ್ಯ ಆರಾಧಕರಾಗಿದ್ದ ಇವರಿಗೆ ಕೃಷಿ ಮತ್ತು ಸ್ವಂತ ಭೂಮಿ ಹೊಂದುವ ಕಲ್ಪನೆಯೇ ಇರಲಿಲ್ಲ. ಇಂದಿಗೂ ಸಹ ಅವರಿಗೆ ಸ್ವಂತ ಭೂಮಿಯಿಲ್ಲ. ಬೇರೆ ಸಮುದಾಯದವರ ಭೂಮಿಯಲ್ಲಿ ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ ಮತ್ತು ತಮಿಳುನಾಡು ಮತ್ತು ಕರ್ನಾಟಕದ ಗಡಿ ಭಾಗಗಳಲ್ಲಿ ಗುಲಾಮರಾಗಿ ಮತ್ತು ಜೀತದಾಳುಗಳಾಗಿ ಜಮೀನು ಮತ್ತು ತೋಟಗಳಲ್ಲಿ ದುಡಿಯುತ್ತಾರೆ. ಅರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ತೋಟಗಾರಿಕಾ ವ್ಯವಸಾಯವನ್ನು ಬ್ರಿಟೀಷರು ಪ್ರಾರಂಭಿಸಿದರು ಅವು ಇರುಳಿಗರು ವಾಸಿಸುವಂತಹ ಪ್ರದೇಶಗಳಾಗಿದ್ದವು. ಇದರಿಂದ ಇರುಳರು ಅರಣ್ಯ ಸಂಪನ್ಮೂಲಗಳನ್ನು ಕಳೆದು ಕೊಳ್ಳುವುದರೊಂದಿಗೆ ಇತರ ಸಮುದಾಯ ವ್ಯಕ್ತಿಗಳ ಹಿಡಿತಕ್ಕೊಳಗಾಗುವಂತಾಯಿತು.

ಕರ್ನಾಟಕದಲ್ಲಿ ಇರುಳರ ಆರ್ಥಿಕ ಮಟ್ಟ ತುಂಬಾ ಕೆಳಮಟ್ಟದ್ದಾಗಿದ್ದು, ಬಹಳ ಕಡಿಮೆ ಜನಸಂಖ್ಯೆ ಹೊಂದಿರುವ ಸಮುದಾಯವಾಗಿದ್ದು, ತುಂಬಾ ವಿಸ್ತಾರವಾದ ಪ್ರದೇಶಗಳಲ್ಲಿ ಹಂಚಿ ಹೊಗಿದ್ದಾರೆ. ಇದರಿಂದ ಇತರ ಬುಡಕಟ್ಟು ಸಮುದಾಯಗಳಿಗೆ ನೀಡುತ್ತಿರುವಂತಹ ಆಶ್ರಮ ಶಾಲೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಸಹಾ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. (ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ).

**ಧರ್ಮ**

ಇರುಳರ ದೇವರ ಆರಾಧಕರಾಗಿದ್ದು, ಅವರ ಪೂರ್ವಿಕರ ಆತ್ಮಗಳನ್ನು ಆರಾಧಿಸುತ್ತಾರೆ. ಹಸಿ ಮಣ್ಣಿನಿಂದ ವಿಗ್ರಹವನ್ನು ತಯಾರಿಸುತ್ತಾರೆ. ಅಲ್ಲದೇ ಕಬಲಮ್ಮ ಎಂಬ ದೇವತೆಯನ್ನು ಆರಾಧಿಸುತ್ತಾರೆ. ಆತ್ಮಗಳು ಜೀವಿಸಲು ಶಕ್ತಿಯನ್ನು ತುಂಬುತ್ತವೆ ಎಂದು ನಂಬುತ್ತಾರೆ. ಹಿಂದೂ ಸಂಸ್ಕೃತಿಯ ಪ್ರಕಾರ ಹೆಣ್ಣು ದೇವತೆಗಳಾದ, ಮಾರಿ, ಮದ್ದೂರಮ್ಮ, ಹಳೆಮಾರಮ್ಮ, ಕೋಣ ಮಾರಿ ಹಾಗೂ ಮಾದಪ್ಪ, ಮುನಿಯಪ್ಪ, ಶ್ರೀಗಳಮುನಿ, ವಾರ್ಗಳಮನಿ ಮತ್ತು ಜಡೇಮುನಿ ಎಂಬ ಗಂಡು ದೇವರಗಳನ್ನು ಆರಾಧಿಸುತ್ತಾರೆ. ಪ್ರತಿ ದೇವರುಗಳ ಬಗ್ಗೆ ಅವರದೆಯಾದ ಕಥೆಗಳನ್ನು ಹೊಂದಿದ್ದು, ಬೇರೆ ದೇವರಗಳಿಗಿಂತ ಈ ದೇವರುಗಳು ತುಂಬಾ ಶಕ್ತಿಯನ್ನು ಹೊಂದಿವೆ ಎಂಬ ನಂಬಿಕೆಯಿಂದ ತುಂಬಾ ಶ್ರದ್ಧೆ, ಭಕ್ತಿಯಿಂದ ಆರಾಧಿಸುತ್ತಾರೆ.

ಭೂತ ಮತ್ತು ಆತ್ಮಗಳ ಕಲ್ಪನೆಯು ಇರುಳಿಗರಲ್ಲಿದ್ದು ಸತ್ತ ವ್ಯಕ್ತಿಗಳ ಇರುತ್ತಿದ್ದ ಪ್ರದೇಶಗಳಲ್ಲಿ ತಿರುಗಾಡುವಾಗ ಆತ್ಮಗಳು ಮನಷ್ಯನ ದೇಹದಲ್ಲಿ ಸೇರಿಕೊಳ್ಳುತ್ತವೆ ಎಂಬ ನಂಬಿಕೆಯಿದೆ. ಹಾಗೂ ಸಗಣಿಯಿರುವ ಕಡೆ ಭೂತಗಳು ಪ್ರವೇಶಿಸುವುದಿಲ್ಲ ಎಂಬ ನಂಬಿಕೆಯಿಂದ ಮನೆ ಹಾಗೂ ಮನೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ಸಗಣಿಯಿಂದ ಸಾರಿಸುತ್ತಾರೆ.

ವ್ಯಕ್ತಿಯ ದೇಹದಲ್ಲಿ ಭೂತ ಬಂದರೆ ಅವರಲ್ಲಿ ಒಬ್ಬ ಗುರು ಭೂತ ಯಾರದ್ದು? ಎಲ್ಲಿಂದ, ಏಕೆ ಬಂತು ಎಂಬುದನ್ನು ಗುರುತಿಸುತ್ತಾರೆ. ಅನಿರೀಕ್ಷತ ಸಾವುಗಳಾದ, ಪ್ರಾಣಿಗಳ ಹಲ್ಲೆ, ಅಪಘಾತ, ಚಿಕ್ಕವರಿದ್ದಾಗ ಸಂಭವಿಸುವ ಸಾವುಗಳಿಗೆ ತುತ್ತಾಗುವ ವ್ಯಕ್ತಿಗಳು ಭೂತವಾಗುತ್ತಾರೆ ಹಾಗೂ ಸತ್ತ ವ್ಯಕ್ತಿ ಕೆಲವೊಂದು ಆಸೆಗಳನ್ನು ಈಡೇರಿಸಿಕೊಳ್ಳಲು ವ್ಯಕ್ತಿಯ ದೇಹ ಪ್ರವೇಶ ಮಾಡುತ್ತವೆ ಎಂಬ ನಂಬಿಕೆ ಇವರಲ್ಲಿದೆ.

ಇರುಳಿಗರು ವಾರ್ಷಿಕವಾಗಿ ಆಚರಿಸುವಂತಹ ಯಾವುದೇ ಹಬ್ಬ–ಹರಿದಿನಗಳನ್ನು ಹೊಂದಿರುವುದಿಲ್ಲ. ಆದರೆ ಅವರು ವಾಸಿಸುವಂತಹ ಪ್ರದೇಶದಲ್ಲಿನ ಇತರ ಸಮುದಾಯದವರು ಆಚರಿಸುವಂತಹ ಹಬ್ಬಗಳನ್ನು ರೂಡಿಸಿಕೊಂಡಿದ್ದಾರೆ. ಉದಾ: ಕರ್ನಾಟಕದಲ್ಲಿ ಯುಗಾದಿ ಹಬ್ಬ ಆಚರಿಸುವಾಗ ಕೇರಳದಲ್ಲಿ ಬೀಸು ಎನ್ನುವ ಹಬ್ಬವನ್ನು ಆಚರಿಸುತ್ತಾರೆ. ಅದೇ ರೀತಿ ಲಿಂಗಾಯುತರು ಶಿವರಾತ್ರಿ ಮತ್ತು ವೈಷ್ಣವರು ವೈಕುಂಠ ಏಕಾದಶಿಯನ್ನು ಆಚರಿಸುವುದು ಇರುಳಿಗರಲ್ಲಿ ರೂಡಿಯಲ್ಲಿದೆ.

**ಸಾಮಾಜಿಕ ರಚನೆ ಮತ್ತು ಕುಟುಂಬ ಜೀವನ:**

ಇರುಳರು ಗುಹೆಗಳಲ್ಲಿ ವಾಸಿಸುವಂತ ಜನರಾಗಿದ್ದು ಯಾವುದೇ ಒಂದು ಇತಿಹಾಸ ಹೊಂದಿರುವುದಿಲ್ಲ. ಆದುದರಿಂದ ಅವರ ಸಂಸ್ಕೃತಿ ಮತ್ತು ಸಂಪ್ರದಾಯ ಅವರ ಸುತ್ತಮುತ್ತಲಿನಲ್ಲಿ ವಾಸಿಸುವಂತಹ ಸಮುದಾಯಗಳಗಳಿಂದ ರೂಡಿಸಿಕೊಂಡವುಗಳಾಗಿವೆ. ಆದರೂ ಸಹ ಅವರು ಮುಖ್ಯವಾಗಿ ಕೆಲವೊಂದು ರೂಡಿಗಳನ್ನು ಅನುಸರಿಸುತ್ತಾರೆ. ಮುಖ್ಯವಾಗಿ ಅವಿಭಕ್ತ ಕುಟುಂಬ ಪದ್ದತಿ ಮತ್ತು ವಯಸ್ಕ ಮಹಿಳೆ ಮತ್ತು ಪುರುಷ ಪರಸ್ಪರ ಸಂಬಂಧ ಹೊಂದಿಕೊಂಡು ಇರುವುದಕ್ಕೆ ಮುಕ್ತ ಅವಕಾಶ ಇರುವುದನ್ನು ಕಾಣಬಹುದು.

ಇರುಳ ಪುರುಷ ವಯಸ್ಕನಾದ ಮೇಲೆ ಸಂಗಾತಿ ಆಯ್ಕೆ ಮಾಡಿಕೊಳ್ಳಲು ಅವನಿಗೆ ಮುಕ್ತ ಅವಕಾಶವಿದ್ದು ಅವನು ಅವಳಿಗಾಗಿ ಗುಡಿಸಲು ನಿರ್ಮಿಸುತ್ತಾನೆ. ನಂತರ ಇತರ ಸಮುದಾಯದಂತೆ

ತಾಳಿಕಟ್ಟಿ ಮದುವೆಯಾಗುತ್ತಾನೆ. ನಂತರ ಇಬ್ಬರೂ ಸೇರಿ ಬೇಟೆಯಾಡುವುದರ ಮೂಲಕ ತಮ್ಮ ವೈವಾಹಿಕ ಜೀವನವನ್ನು ಪ್ರಾರಂಭಿಸುತ್ತಾರೆ. ನಂತರ ಆಹಾರ ಸಂಗ್ರಹಣೆ ಮಾಡುವುದರ ಜೊತೆಗೆ ಮಕ್ಕಳನ್ನು ಸಾಕಬೇಕಾಗಿರುತ್ತದೆ. ಒಂದು ತಂಡದೊಂದಿಗೆ ಬೇಟೆಯಾಡಿದರೆ ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವುದು ಇವರ ಪದ್ಧತಿಯಾಗಿದೆ. (ಕೆ. ಬಿ. ಸಿದ್ದಗಂಗಯ್ಯ–1993)

ಇರುಳಿಗರಿಗೆ ಗೋತ್ರ ಅಥವಾ ಕುಲದ ಬಗೆ ಅಷ್ಟೇನೂ ಗೊತ್ತಿಲ್ಲ. ಆದರೂ ಕೂಡ ಒಂದೇ ದೇವರನ್ನು ಪೂಜಿಸುವ ಕುಟುಂಬದವರೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸುವುದಿಲ್ಲ. ಏಕೆಂದರೆ ಒಂದೇ ದೇವರನ್ನು ಪೂಜಿಸುವವರು ಸಹೋದರ ಸಂಬಂಧಿಗಳು ಎಂಬ ನಂಬಿಕೆ ಇವರಲ್ಲಿದೆ. ಆದುದರಿಂದ ಇವರು ಬೇರೆ ಬೇರೆ ದೇವರುಗಳನ್ನು ಪೂಜಿಸುವುವರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ.

ಬಲಿಷ್ಟ ಮತ್ತು ಬುದ್ಧಿವಂತನಾಗಿರುವ ವ್ಯಕ್ತಿಯನ್ನು ಹಾಡಿ/ಹಳ್ಳಿಯ ಮುಖ್ಯಸ್ಥನನ್ನಾಗಿ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ವ್ಯಕ್ತಿಯನ್ನು ನಾಡ ಗೌಡ ಎಂದು ಕರೆಯುತ್ತಾರೆ. ಇವನಿಗೆ ಸಹಾಯಕನಾಗಿವ ವ್ಯಕ್ತಿಯನ್ನು ಕೋಲುಕಾರ ಎಂದು ಕರೆಯುತ್ತಾರೆ. ಈ ಹುದ್ದೆಯು ವಂಶ ಪರಂಪರೆಯಾಗಿರುತ್ತದೆ. ಇರುಳಿಗರು ನಾಡ ಗೌಡನ ನೇತೃತ್ವದಲ್ಲಿ ನ್ಯಾಯ ಪಂಚಾಯಿತಿ ಮಾಡುವುದು, ಮದುವೆ ಮತ್ತು ಸಾವು ಇತ್ಯಾದಿ ಕೆಲಸಗಳನ್ನು ಮಾಡಲಾಗುತ್ತದೆ. ಕಟ್ಟು ಗೌಡ, ನಾಡ ಗೌಡ ವಿಧಿಸಿದಂತಹ ವಿಧಿ ವಿಧಾನಗಳನ್ನು ಅನುಷ್ಟಾನಗೊಳಿಸುವುದು ಇವನ ಪ್ರಮುಖ ಕೆಲಸವಾಗಿದ್ದು, ಕೋಲುಗಾರ ಅದರ ಬಗ್ಗೆ ಮಾಹಿತಿ ನೀಡುತ್ತಾನೆ. ಬೇರೆ ಸಮುದಾಯರೊಂದಿಗೆ ವಿವಾಹ, ಹೋಟೆಲ್‌ಗಳಲ್ಲಿ ತಿನ್ನುವುದು. ಆಹಾರ ಪದ್ಧತಿಗಳ ಬದಲಾವಣೆ ಮತ್ತು ವಯಸ್ಕರಿಗೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಪಟ್ಟವು ನಿಷೇಧ ಮಾಡಿದ ಪದ್ದತಿಗಳಾಗಿದ್ದು, ಇವುಗಳನ್ನು ವಿರೋದಿಸುವರಿಗೆ ಚಾಟಿ ಏಟು, ಇರುವೆಯಿಂದ ಕಚ್ಚಿಸುವುದು ಮತ್ತು ಕಲ್ಲುಗಳ ಮೇಲೆ ನಡೆಸುವುದು ಇಂತಹ ಶಿಕ್ಷೆಗಳನ್ನು ನೀಡಲಾಗುತ್ತದೆ. (ಕುರುವ ಬಸವರಾಜು–2000). ಒಂದು ವೇಳೆ ನ್ಯಾಯ ಕೂಟದಲ್ಲಿ ಸಮಸ್ಯೆ ಬಗೆ ಹರಿಯದಿದ್ದಲ್ಲಿ ಹಾಡಿಯಿಂದ ಸಮೀಪವಿರುವ ಹಳ್ಳಿಯಲ್ಲಿಯ ಒಕ್ಕಲಿಗ ಅಥವಾ ಲಿಂಗಾಯತ ಸಮುದಾಯಗಳ ಮೂಲಕ ಬಗೆ ಹರಿಸಿಕೊಳ್ಳುತ್ತಾರೆ.

**ಸಂಸ್ಕೃತಿ ಮತ್ತು ಸಂಪ್ರದಾಯ:**

**ಜನನ**

ಇರುಳರಲ್ಲಿ ಗರ್ಭಿಣಿ ಸ್ತ್ರೀಯು 8 ತಿಂಗಳನವರೆಗೆ ಅರಣ್ಯ, ತೋಟ ಮತ್ತು ಮನೆಯಲ್ಲಿ ಕೆಲಸ ಮಾಡುತ್ತಾಳೆ. ತನ್ನ ಗಂಡನೊಂದಿಗೆ ಯಾವಾಗಲೂ ಜೊತೆಯಾಗಿಯೇ ಇರುತ್ತಾಳೆ. ಗರ್ಭಿಣಿ ಸ್ತ್ರೀಯು ಎಲ್ಲಾ ರೀತಿಯ ಆಹಾರಗಳನ್ನು ಸೇವಿಸುತ್ತಾಳೆ. ಹಸಿರು ಎಲೆಗಳನ್ನು ಹೆಚ್ಚು ಸೇವಿಸುತ್ತಾರೆ ಮಗು ಹುಟ್ಟುವಾಗ ಮತ್ತು ಮಗುವಿನ ಜನನದ ನಂತರ ಮಗುವಿಗೆ ಮತ್ತು ತಾಯಿಯ ಆರೈಕೆಗೆ ಸೂಲಗಿತ್ತಿಯ ಸಹಾಯ ಪಡೆಯಲಾಗುತ್ತದೆ.

**ಪ್ರೌಡಾವಸ್ಥೆಯ ಆಚರಣೆಗಳು**

ಹೆಣ್ಣು ಮಗಳು ಋತುಮತಿಯಾದಾಗ ಸೋದರ ಮಾವ ಮನೆಯ ಹೊರೆಗೆ ಹಸಿರು ಗುಡಿಸಲನ್ನು ನಿರ್ಮಿಸುತ್ತಾನೆ. ಅದಕ್ಕೆ ಗುಡ್ಲು ಎಂದು ಕರೆಯುತ್ತಾರೆ. ಋತುಮತಿ ಅವಧಿ ನಂತರ ಅವಳನ್ನು ಮನೆಯ

ಒಳಗೆ ಕರೆತರಲಾಗುತ್ತದೆ. ತಮ್ಮ ಎಲ್ಲಾ ಬಂಧು ಬಾಂದವರಿಗೂ, ಸಮುದಾಯದವರಿಗೂ ಹೇಳಿ ವಧುವಿನಂತೆ ಅವಳನ್ನು ಸಿಂಗರಿಸಿ ಹಬ್ಬ ಆಚರಿಸುತ್ತಾರೆ. ಇದಾದ ನಂತರ ಹಬ್ಬ–ಹರಿದಿನಗಳಲ್ಲಿ ಅವಳನ್ನು ಮದುವೆಗೆ ಗುರುತಿಸಲಾಗುತ್ತದೆ. ಅವಳ ತಾಯಿಯ ತಮ್ಮ ಮತ್ತು ಅವನ ಮಗನಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.

**ವಿವಾಹ**

ಮೊದಲಿಗೆ ಇರುಳರಲ್ಲಿ ಪರಸ್ಪರ ಯುವತಿ–ಯುವಕ ಒಪ್ಪಿ ಒಂದೆರಡು ದಿನಗಳ ಕಾಲ ಅರಣ್ಯದಲ್ಲಿ ವಾಸಮಾಡಿ ನಂತರ ತಮ್ಮ ಸಮುದಾಯಕ್ಕೆ/ಹಾಡಿಗೆ ಹಿಂದಿರುಗಿದಾಗ ಅವರ ಸಮುದಾಯದಲ್ಲಿ ಅವರನ್ನು ಪರಸ್ಪರ ದಂಪತಿಗಳು ಎಂದು ಗುರುತಿಸಿ, ಅವರು ತಮ್ಮ ದಾಂಪತ್ಯ ಜೀವನಕ್ಕೆ ಒಂದು ಗುಡಿಸಲುನ್ನಯ ನಿರ್ಮಿಸಿಕೊಂಡು ತಮ್ಮ ಜೀವನಕ್ಕೆ ಬೇಕಾಗುವ ಆಹಾರವನ್ನು ಸಂಗ್ರಹಿಸುವುದರ ಜೊತೆಗೆ ಮಕ್ಕಳ ಪೋಷಣೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಅರಣ್ಯದಿಂದ ಮರಳಿದ ನಂತರ ತಮ್ಮ ಸಮುದಾಯದವರಿಗೆ ಊಟ ಹಾಕಿಸಿ ಮುದುವೆ ಸಂಭ್ರಮಾಚರಣೆ ಮಾಡುತ್ತಾರೆ. ಆದರೆ ಇತ್ತೀಚಿಗೆ ಎರಡು ಕುಟುಂಬಗಳ ಹಿರಿಯರು ಪರಸ್ಪರ ಒಪ್ಪಿ ವಿವಾಹ ಮಾಡುವುದು ರೂಡಿಯಲ್ಲಿದೆ. ಜೊತೆಗೆ ಬಾಲ್ಯ ವಿವಾಹವು ಸಹಾ ಸಾಮಾನ್ಯವಾಗಿ ಕಂಡು ಬರುತ್ತದೆ.

**ಮರಣ**

ಇರುಳಿಗರು ಸತ್ತ ವ್ಯಕ್ತಿಗಳನ್ನು ಕಂಡರೆ ಭಯ ಪಡುವುದಿಲ್ಲ. ಸಾವು ಸಂಭವಿಸಿದಾಗ ಹಾಡಿಯಲ್ಲಿರುವ ಯುವಕರು ಡೊಳ್ಳು (Drum) ಉಪಯೋಗಿಸಿಕೊಂಡು ಹಾಡಿನೊಂದಿಗೆ ಕುಣಿಯುತ್ತಾರೆ. ಸತ್ತ ವ್ಯಕ್ತಿಯ ಮಗ ಅಥವಾ ಅವನ ಸಂಬಂಧಿಗಳು ಎಲ್ಲ ವಿಧಿ ವಿಧಾನಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಎಲ್ಲಾ ಆಚರಣೆಗಳು ನಾಡಗೌಡನ ಸಮ್ಮುಖದಲ್ಲಿ ನೆರವೇರುತ್ತವೆ. ಈ ಸೇವೆಗೆ ಸತ್ತ ವ್ಯಕ್ತಿಯ ಮನೆಯವರು ಕಾಣಿಕೆ ನೀಡುತ್ತಾರೆ.

ಸತ್ತ ವ್ಯಕ್ತಿಯನ್ನು ತಣ್ಣೀರಿನಿಂದ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ಹಾಕಿ ಕಕ್ಕೆ ಎಲೆಗಳಿಂದ ಸಿಂಗರಿಸಿ ಕುಳಿತುಕೊಳ್ಳುವ ಭಂಗಿಯಲ್ಲಿ ಕುಳಿಸಲಾಗುತ್ತದೆ. ಬಿದಿರಿನಿಂದ ಮಾಡಿದಂತಹ ಚಟ್ಟದ ಮೇಲೆ ಮಲಗಿಸಿ ಮನೆಯಿಂದ ಶವ ತೆಗೆದುಕೊಂಡು ಹೋಗಲಾಗುತ್ತದೆ. ಈ ಸಮಯದಲ್ಲಿ ಹಾಡು ಮತ್ತು ಕುಣಿತವನ್ನು ನಿಲ್ಲಿಸಲಾಗುತ್ತದೆ.

ಶವ ಸಂಸ್ಕಾರವನ್ನು ಪ್ರತಿ ಕುಟುಂಬದವರು ತಮ್ಮದೇ ಆದ ಜಾಗದಲ್ಲಿ ನೇರೆವೇರಿಸುತ್ತಾರೆ. ಮೊದಲು ಹೂತ ಶವದ ಎಲುಬುಗಳನ್ನು ತೆಗೆದು ಹೊಸ ಶವವನ್ನು ಹೂಳುವ ಪದ್ದತಿಯಿದೆ. ಶವದ ತಲೆಯ ಹತ್ತಿರ ನೆನಪಿಗಾಗಿ ಒಂದು ಕಲ್ಲನ್ನು ನಿಲ್ಲಿಸುವುದು ಇವರ ವಾಡಿಕೆ. ಶವ ಸಂಸ್ಕಾರದ ನಂತರ ಸತ್ತ ವ್ಯಕ್ತಿಯ ಆತ್ಮ ಶಾಂತಿಗಾಗಿ ಆ ವ್ಯಕ್ತಿಯ ಇಷ್ಟವಾದ ಆಹಾರ ತಯಾರಿಸಿ ಹಂಚಲಾಗುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಇರುಳಿಗ ಬುಡಕಟ್ಟು ಸಮುದಾಯವರ ಜೀವನವು ಅತ್ಯಂತ ವಿಶಿಷ್ಟವಾಗಿದ್ದು, ಅವರದೇ ಆದ ಆಚಾರ, ವಿಚಾರ, ಸಾಮಾಜಿಕ ಮತತ್ತು ಆರ್ಥಿಕ ವ್ಯವಸ್ಥೆಯನ್ನು

ಹೊಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸರ್ಕಾರದ ಪ್ರಯತ್ನದಿಂದಾಗಿ ಮೊದಲಿಗಿಂತ ಬದಲಾಗುತ್ತಿದ್ದಾರೆ. ಹಾಗೆಯೇ ವಿವಿಧ ಸಮುದಾಯಗಳ ಪ್ರಭಾವವು ಇವರ ಸಮುದಾಯ ಮತ್ತು ಸಮಾಜದ ಮೇಲೆ ಪರಿಣಾಮ ಬೀರಿ ಅವರ ಮೂಲ ಸಂಸ್ಕೃತಿ ಬದಲಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಕುರುವ ಬಸವರಾಜು (2000). ಇರುಳರು. ಇಲ್ಲಿ ಎಚ್.ಜಿ ಲಕ್ಕಪ್ಪಗೌಡ (ಸಂ.) ಕರ್ನಾಟಕದ ಬುಡಕಟ್ಟುಗಳು. ಸಂಪುಟ.1, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮೆ, ಬೆಂಗಳೂರು.
- ಸಿದ್ದಲಿಂಗಯ್ಯ ಕೆ.ಬಿ. (1993). ಇಲ್ಲಿಗರ ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಬೈರೇಗೌಡ ಎಂ. (1997). ಧರ್ಮಪುರಿಯಿಂದ ತಿರುನಲ್ವೇಲಿವರೆಗೆ (ತಮಿಳುನಾಡು ಜಾನಪದ ಪ್ರವಾಸಕಥನ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಉಮಾಪತಿ ಬಿ.ಇ. (1979). ಪರಿಶಿಷ್ಟ ಬುಡಕಟ್ಟುಗಳು ಮತ್ತು ಜಾತಿಗಳು. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಮೈಸೂರು.
- *Sigh. K.S. (1994). The Scheduled Tribes People of India, National Series Vol-III, AsI Oup, Delhi*
- *Census Report 2001, Govt of India.*